# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ

# ಬಳ್ಳಾರಿ

## ಸತ್ರ ಮೊಕದ್ದಮೆ ಸಂಖ್ಯೆಃ89/2024

**ಪಿ.ಡಬ್ಲ್ಯೂಃ6 (ಸಿಡಬ್ಲ್ಯೂಃ11 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀಮತಿ ವಿಜಯಲಕ್ಷ್ಮಿ** |
| **ಗಂಡನ ಹೆಸರು** | : | **ಚಿನ್ನಓಬಳೇಶ** |
| **ವಯಸ್ಸು** | : | **30 ವರ್ಷ** |
| **ಕೆಲಸ** | : | **ಗೃಹಿಣಿ** |
| **ವಾಸ ಸ್ಥಳ** | : | **ಬಳ್ಳಾರಿ** |

**ಸಾಕ್ಷಿಯನ್ನು ದಿನಾಂಕ 24.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಪ್ರಾಸಾ.1 ಗೊತ್ತಿದ್ದಾರೆ. ಆದರೆ ಪ್ರಾಸಾ.1 ರವರ ಮಗಳು ಅನ್ನಪೂರ್ಣ ಅಷ್ಟಾಗಿ ಪರಿಚಯ ಇಲ್ಲ. ನನಗೆ ಆರೋಪಿತರ ಪರಿಚಯ ಇದೆ .

**2.** ಅನ್ನಪೂರ್ಣ ಮೃತಪಟ್ಟಿದ್ದಾಳೆ. ಆದರೆ ಆಕೆಯ ಸಾವು ಯಾವ ಕಾರಣಕ್ಕೆ ಮತ್ತು ಹೇಗೆ ಸಂಭವಿಸಿದೆ ಎಂಬುದು ನನಗೆ ಗೊತ್ತಿಲ್ಲ. ನಾನು ಸದರಿ ಅನ್ನಪೂರ್ಣಳ ಸಾವಿನ ವಿಚಾರ ಕುರಿತಂತೆ ಆರೋಪಿತರ ವಿರುದ್ಧ ಪೊಲೀಸರಿಗೆ ಯಾವುದೆ ಹೇಳಿಕೆ ನೀಡಿಲ್ಲ. ಅನ್ನಪೂರ್ಣ ಬದುಕಿದ್ದಾಗ ಆರೋಪಿತರು ಆಕೆಯೊಂದಿಗೆ ಹೇಗೆ ಇದ್ದರು ಎಂಬುದು ಸಹ ನನಗೆ ಗೊತ್ತಿಲ್ಲ.

**S.C.No. 89/2024**
**P.W. 6 (C.W. 11)**
**Date : 24.07.2026**

***(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು, ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ. )***

**ಪಾಟಿ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

**3.** ಅನ್ನಪೂರ್ಣ ಬದುಕಿದ್ದಾಗ ಆರೋಪಿತರು ಅನ್ನಪೂರ್ಣಳಿಗೆ ತಡೆಯಲಾರದ ಕಿರುಕುಳಗಳನ್ನು ನೀಡಿದ್ದು, ಸೂಚಿಸಿದ ಕಿರುಕುಳಗಳ ಬಗ್ಗೆ ನಿಮಗೆ ಮಾಹಿತಿಯನ್ನು ಅನ್ನಪೂರ್ಣಳೇ ಖುದ್ದಾಗಿ ತಿಳಿಸಿದ್ದು , ಸೂಚಿಸಿದ ಕಿರುಕುಳಗಳ ಕಾರಣ ಅನ್ನಪೂರ್ಣ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿಗಳು ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಈಗ ಅಸತ್ಯ ಸಾಕ್ಷಿ ನುಡಿದಿರಿ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳಿಗೆ ಈಗ ನನಗೆ ಓದಿ ಹೇಳಿದಂತೆ ಅಂದರೆ " ನಾನು ಮೇಲಿನ ವಿಳಾಸದಲ್ಲಿ ...... ವಿಚಾರ ತಿಳಿಯಿತು " ಎಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ಈಗ **ನಿಪಿ.10** ಎಂದು ಗುರುತಿಸಲಾಯಿತು.

## ಪಾಟೀಸವಾಲುಃ ಆರೋಪಿ ಪರ ವಕೀಲರಿಂದ:

## ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**

**S.C.No. 89/2024**
**P.W. 6 (C.W. 11)**
**Date : 24.07.2026**